0501/0901/2062

**V Semester 3 Year LL.B. / IX Semester 5 Year B.A. LL.B. /B.B.A. LL.B. / IX Semester 5 Yr. B.A. LL.B. (Maj.-Min.) Examination, December 2019**
**CIVIL PROCEDURE CODE & LIMITATION ACT**
**(Old / New)**

Duration : 3 Hours  Max. Marks : 100

**Instructions** : 1. Answer Q. No. **9** and **any five** of the remaining questions.
2. Q. No. **9** carries **20** marks and the remaining questions carry **16** marks each.
3. Answers should be in **English** or **Kannada** completely.

**ಸೂಚನೆಗಳು** : 1. ಪ್ರಶ್ನೆ ಸಂಖ್ಯೆ **9** ಮತ್ತು ಉಳಿದವುಗಳಲ್ಲಿ ಯಾವುದೇ **ಐದು** ಪ್ರಶ್ನೆಗಳನ್ನು ಉತ್ತರಿಸಿರಿ.
2. ಪ್ರಶ್ನೆ ಸಂಖ್ಯೆ **9** ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ ತಲಾ **16** ಅಂಕಗಳು.
3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಭಾಷೆ ಅಥವಾ ಕನ್ನಡದಲ್ಲಿಯೇ ಬರೆಯತಕ್ಕದ್ದು.

Q. No. 1. Discuss the provisions of CPC in respect of place of suing. Marks : 16

ದಾವಾ ಹೂಡಿಕೆಯ ಸ್ಥಳವನ್ನು ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆಯಲ್ಲಿನ ಉಪಬಂಧಗಳನ್ನು ಚರ್ಚಿಸಿರಿ.

Q. No. 2. Explain the rules of CPC relating to award of interest in civil suits. Marks : 16

ದಿವಾನಿ ದಾವೆಗಳಲ್ಲಿ ಬಡ್ಡಿಯನ್ನು ನೀಡುವ ಕುರಿತು ಇರುವ ನಿಯಮಗಳನ್ನು ವಿವರಿಸಿರಿ.

Q. No. 3. What is the special procedure to be followed in suits by or against minors ? Marks : 16

ಅಲ್ಪವಯಿಗಳು ಹೂಡುವ ಹಾಗೂ ಅವರ ವಿರುದ್ಧ ಹೂಡುವ ದಾವೆಗಳಲ್ಲಿ ಅನುಸರಿಸಬೇಕಾದ ವಿಶೇಷ ಪ್ರಕ್ರಿಯೆಯೇನು ?

Q. No. 4. Who is a "receiver" ? What are his powers and functions ? Marks : 16

"ಸ್ವೀಕೃತಿದಾರ" ನೆಂದರೆ ಯಾರು ? ಅವನ ಅಧಿಕಾರಗಳು ಮತ್ತು ಕಾರ್ಯಗಳೇನು ?

Q. No. 5. Discuss about reference under CPC. Marks : 16

ದಿವಾನಿ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಉಲ್ಲೇಖವನ್ನು ಕುರಿತು ಚರ್ಚಿಸಿರಿ.

Q. No. 6. Explain the different modes of execution of decrees. Marks : 16

ಡಿಕ್ರಿಗಳ ಅಮಲ್ಜಾರಿಯ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 7. Explain condonation of delay under the Limitation Act. Marks : 16

ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ವಿಳಂಬವನ್ನು ಮನ್ನಿಸುವುದನ್ನು ವಿವರಿಸಿರಿ.

Q. No. 8. Write short note on **any two** of the following : Marks : 2×8=16

ಈ ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಕುರಿತು ಲಘು ಟಿಪ್ಪಣಿ ಬರೆಯಿರಿ :

(a) Foreign Judgements

ವಿದೇಶಿ ತೀರ್ಪುಗಳು

(b) Issues

ವಿವಾದಾಂಶಗಳು

(c) Prescription.

ದೀರ್ಘಕಾಲದ ಭೋಗಾಧಿಕಾರ.

Q. No. 9. Solve **any two** of the following problems : Marks : 2×10=20

ಈ ಕೆಳಗಿನವುಗಳಲ್ಲಿ ಯಾವುದೇ **ಎರಡು** ಸಮಸ್ಯೆಗಳನ್ನು ಪರಿಹರಿಸಿರಿ :

(a) Rajesh has instituted a suit against Shekhar for recovery of Rs. 1 lakh, in the Court of Senior Civil Judge. The suit is tried by the court and at the stage of arguments Shekhar contends that the court has no jurisdiction to decide the case. Decide.

ರಾಜೇಶನು ಶೇಖರನ ವಿರುದ್ಧ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ರೂ. 1 ಲಕ್ಷದ ವಸೂಲಿಗಾಗಿ ದಾವೆಯನ್ನು ಹೂಡಿದ್ದಾನೆ. ನ್ಯಾಯಾಲಯದಲ್ಲಿ ಈ ದಾವೆಯು ನಡೆದು ವಾದದ ಹಂತದಲ್ಲಿರುವಾಗ ಶೇಖರನು ಈ ದಾವೆಯನ್ನು ನಿರ್ಧರಿಸಲು ನ್ಯಾಯಾಲಯಕ್ಕೆ ವ್ಯಾಪ್ತಿಯಿಲ್ಲ ಎಂದು ವಾದಿಸುತ್ತಾನೆ. ನಿರ್ಧರಿಸಿರಿ.

(b) In a suit the defendant refused to accept the summons which was issued to him. The process server left the summons on a table in the defendant's house. Is the service valid ?

ಒಂದು ದಾವೆಯಲ್ಲಿ ಪ್ರತಿವಾದಿ ತನಗೆ ನೀಡಿದ ಸಮನ್ಸನ್ನು ಸ್ವೀಕರಿಸಲು ನಿರಾಕರಿಸುತ್ತಾನೆ. ಆಗ ಬೇಲಿಫ್‌ನು ಆ ಸಮನ್ಸನ್ನು ಪ್ರತಿವಾದಿಯ ಮನೆಯಲ್ಲಿರುವ ಒಂದು ಮೇಜಿನ ಮೇಲೆ ಇಟ್ಟು ಹೋಗುತ್ತಾನೆ. ಈ ಸಮನ್ಸಿನ ಜಾರಿಯು ಊರ್ಜಿತವೇ ?

(c) Chetan has taken a loan from Ganesh. He has given an acknowledgment to Ganesh before the expiry of limitation stating that, "I owe you Rs. 50,000. But I refuse to pay the same." Examine the validity of the acknowledgement.

ಚೇತನನು ಗಣೇಶನಿಂದ ಸಾಲವನ್ನು ಪಡೆದಿದ್ದಾನೆ. ಅದರ ಕಾಲಪರಿಮಿತಿ ಮುಗಿಯುವ ಮೊದಲೇ ಆವನು ಒಂದು ಸ್ವೀಕೃತಿ ಪತ್ರವನ್ನು ಬರೆದು "ನಾನು ನಿಮಗೆ ರೂ. 50,000 ಕೊಡಬೇಕಾಗಿದೆ. ಆದರೆ ನಾನು ಅದನ್ನು ಕೊಡಲು ನಿರಾಕರಿಸುತ್ತೇನೆ" ಎಂದು ಹೇಳುತ್ತಾನೆ. ಈ ಸಾಲ ಸ್ವೀಕೃತಿ ಪತ್ರದ ಊರ್ಜಿತತೆಯನ್ನು ಪರಿಶೀಲಿಸಿರಿ.

(6)

**0501/2062/0901**

**V Semester 3 Year LL.B./IX Semester 5 Year B.A. LL.B./B.B.A. LL.B./**
**IX Semester 5 Year B.A. LL.B. (Maj.-Min.-System) Examination, June/July 2019**

# CIVIL PROCEDURE CODE AND LIMITATION ACT

**(Old and New)**

Duration : 3 Hours                                                Max. Marks : 100

**Instructions** : 1. Answer Q. No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written either in **English** or **Kannada** **completely**.

**ಸೂಚನೆಗಳು** : 1. ಪ್ರಶ್ನೆ ಸಂಖ್ಯೆ **9** ಮತ್ತು ಉಳಿದವುಗಳಲ್ಲಿ ಯಾವುದೇ ಐದು ಪ್ರಶ್ನೆಗಳನ್ನು ಉತ್ತರಿಸಿರಿ.

2. ಪ್ರಶ್ನೆ ಸಂಖ್ಯೆ **9** ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ **ತಲಾ 16** ಅಂಕಗಳು.

3. ಉತ್ತರಗಳನ್ನು **ಸಂಪೂರ್ಣವಾಗಿ ಆಂಗ್ಲಭಾಷೆ** ಅಥವಾ **ಕನ್ನಡದಲ್ಲಿಯೇ** ಬರೆಯತಕ್ಕದ್ದು.

Q. No. 1. What is a "Suit" ? Describe different stages of a suit. Marks : 16
"ದಾವೆ" ಎಂದರೇನು ? ದಾವೆಯೊಂದರ ವಿವಿಧ ಹಂತಗಳನ್ನು ವರ್ಣಿಸಿರಿ.

Q. No. 2. What are "Costs" ? Explain the different types of costs awarded in civil cases. Marks : 16
"ವೆಚ್ಚ" ಎಂದರೇನು ? ದಿವಾನಿ ಪ್ರಕರಣಗಳಲ್ಲಿ ನೀಡಲಾಗುವ ವಿವಿಧ ಪ್ರಕಾರಗಳ ವೆಚ್ಚಗಳನ್ನು ವಿವರಿಸಿರಿ.

Q. No. 3. What is the special procedure to be followed in a suit by or against partnership firms ? Marks : 16
ಪಾಲುದಾರಿಕಾ ಸಂಸ್ಥೆಗಳು ಹೂಡುವ ಮತ್ತು ಅವುಗಳ ವಿರುದ್ಧ ಹೂಡುವ ದಾವೆಗಳಲ್ಲಿ ಅನುಸರಿಸಬೇಕಾದ ವಿಶೇಷ ಪ್ರಕ್ರಿಯೆಯೇನು ?

Q. No. 4. What is a "Commission" ? What are the different purposes for which a commission may be appointed ? Marks : 16
"ಆಯೋಗ" ಎಂದರೇನು ? ಯಾವ ವಿವಿಧ ಉದ್ದೇಶಗಳಿಗಾಗಿ ಆಯೋಗವನ್ನು ನೇಮಿಸಬಹುದು ?

Q. No. 5. What are "Appeals" ? Discuss the different classes of appeals provided under C.P.C. Marks : 16

"ಮೇಲ್ಮನವಿ" ಎಂದರೇನು ? ದಿವಾನಿ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಇರುವ ವಿವಿಧ ವರ್ಗಗಳ ಮೇಲ್ಮನವಿಗಳನ್ನು ಕುರಿತು ಚರ್ಚಿಸಿರಿ.

Q. No. 6. What is meant by "executing court" ? What are its powers ? Marks : 16

"ಅಮಲ್ಜಾರಿ ನ್ಯಾಯಾಲಯ" ಎಂದರೇನು ? ಅದರ ಅಧಿಕಾರಗಳೇನು ?

Q. No. 7. "Limitation extinguishes remedy, but not right". Explain. Marks : 16

"ಕಾಲಪರಿಮಿತಿಯು ಪರಿಹಾರವನ್ನು ನಾಶಗೊಳಿಸುತ್ತದೆ ಹಕ್ಕನ್ನಲ್ಲ". ವಿವರಿಸಿರಿ.

Q. No. 8. Write short notes on **any two** of the following : Marks : 2×8=16

(a) Pecuniary jurisdiction

(b) Caveat petition

(c) Effect of fraud on period of limitation.

ಈ ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಕುರಿತು ಲಘು ಟಿಪ್ಪಣಿ ಬರೆಯಿರಿ :

(a) ವಿತ್ತೀಯ ನ್ಯಾಯಾಧಿಕರಣ

(b) ಕೇವಿಯೆಟ್ ಅರ್ಜಿ

(c) ಕಾಲಪರಿಮಿತಿಯ ಮೇಲೆ ಮೋಸದ ಪರಿಣಾಮ.

Q. No. 9. Solve **any two** of the following problems : Marks : 2×10=20

ಈ ಕೆಳಗಿನವುಗಳಲ್ಲಿ ಯಾವುದೇ ಎರಡು ಸಮಸ್ಯೆಗಳನ್ನು ಪರಿಹರಿಸಿರಿ :

(a) Anil who is resident of Bellary publishes a newspaper containing statements defamatory of Basant. The newspaper is circulated in Bidar, Bellary, Kalaburgi and Raichur. Basant desires to institute suit against Anil. Where can he institute the suit ?

ಬಳ್ಳಾರಿಯ ವಾಸಿಯಾದ ಅನಿಲನು ಒಂದು ವೃತ್ತಪತ್ರಿಕೆಯನ್ನು ಪ್ರಕಟಿಸಿ ಅದರಲ್ಲಿ ಬಸಂತನಿಗೆ ಮಾನಹಾನಿಯನ್ನುಂಟುಮಾಡುವ ಹೇಳಿಕೆಯನ್ನು ಮಾಡಿದ್ದಾನೆ. ಆ ವೃತ್ತಪತ್ರಿಕೆಯು ಬೀದರ್, ಬಳ್ಳಾರಿ, ಕಲಬುರ್ಗಿ ಮತ್ತು ರಾಯಚೂರುಗಳಲ್ಲಿ ಮಾರಾಟವಾಗುತ್ತದೆ. ಬಸಂತನು ಅನಿಲನ ವಿರುದ್ಧ ಮಾನಹಾನಿಗಾಗಿ ದಾವೆಯನ್ನು ಹೂಡಲು ಬಯಸಿದ್ದಾನೆ. ಅವನು ಎಲ್ಲಿ ದಾವೆಯನ್ನು ಹೂಡಬಹುದು ?

(b) Ramesh has instituted a suit against Santosh, seeking possession of a house on the ground that he has purchased the same from Santosh. Now he wants to amend the plaint to the effect that he is entitled to the possession of the house as a tenant. Can he succeed ?

ರಮೇಶನು ಸಂತೋಷನ ವಿರುದ್ಧ ದಾವೆಯೊಂದನ್ನು ಹೂಡಿ ತಾನು ಸಂತೋಷನಿಂದ ಖರೀದಿಸಿದ್ದೇನೆಂದು ಹೇಳುವ ಮನೆಯೊಂದರ ಸ್ವಾಧೀನತೆಯನ್ನು ಕೇಳಿದ್ದಾನೆ. ಈಗ ಅವನು ತಾನು ಆ ಮನೆಯ ಬಾಡಿಗೆದಾರನಾಗಿದ್ದು ಆ ಕಾರಣ ಮನೆಯ ಸ್ವಾಧೀನಕ್ಕೆ ಅರ್ಹನಾಗಿರುತ್ತೇನೆಂದು ವಾದಪತ್ರದ ತಿದ್ದುಪಡಿ ಮಾಡಲು ಬಯಸಿದ್ದಾನೆ. ಅವನು ಯಶಸ್ವಿಯಾಗಬಹುದೇ ?

(c) Keshav is a tenant in Sunil's house since last 35 years. Now Sunil wants the house for his own use. He has filed an eviction petition against Keshav. Keshav contends that he has become owner of the house by adverse possession. Decide.

ಕೇಶವನು ಸುನೀಲನ ಮನೆಯಲ್ಲಿ ಕಳೆದ 35 ವರ್ಷಗಳಿಂದ ಬಾಡಿಗೆದಾರನಾಗಿದ್ದಾನೆ. ಈಗ ಸುನೀಲನಿಗೆ ಆ ಮನೆಯು ಸ್ವಂತ ಉಪಯೋಗಕ್ಕಾಗಿ ಬೇಕಾಗಿದೆ. ಅವನು ಕೇಶವನ ವಿರುದ್ಧ ಆ ಮನೆಯನ್ನು ಖಾಲಿ ಮಾಡಲು ಅರ್ಜಿಯನ್ನು ಸಲ್ಲಿಸಿದ್ದಾನೆ. ಕೇಶವನು ತಾನು ಪ್ರತಿಕೂಲ ಸ್ವಾಧೀನದಿಂದ ಆ ಮನೆಯ ಒಡೆಯನಾಗಿದ್ದೇನೆಂದು ವಾದಿಸುತ್ತಾನೆ. ನಿರ್ಧರಿಸಿರಿ.

0501/0901/2062

**3 Year LL.B. V Semester / 5 Year B.A. LL.B./ B.B.A. LL.B. IX Semester / 5 Year B.A. LL.B. (Maj. – Min.) IX Semester (Old/New) Examination, December 2018**

# CIVIL PROCEDURE CODE AND LIMITATION ACT

Duration : 3 Hours | Max. Marks : 100

**Instructions** : 1. Answer Q. No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written either in **English** or **Kannada** **completely**.

Q. No. 1. Discuss the provisions pertaining to "place of suits" under Civil Procedure Code. Marks :16

ದಿವಾಣಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ "ದಾವೆಯ ಸ್ಥಳಕ್ಕೆ" ಸಂಬಂಧಿಸಿದ ಉಪಬಂಧಗಳನ್ನು ಚರ್ಚಿಸಿರಿ.

Q. No. 2. Briefly explain the different parts of a plaint. Marks :16

ವಾದಪತ್ರದ ವಿವಿಧ ಭಾಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Q. No. 3. What is temporary injunction ? Explain the grounds and principles for granting temporary injunction. Marks :16

ತಾತ್ಕಾಲಿಕ ನಿರ್ಬಂಧಾಜ್ಞೆ ಎಂದರೇನು ? ತಾತ್ಕಾಲಿಕ ನಿರ್ಬಂಧಾಜ್ಞೆಯನ್ನು ನೀಡಲು ಬೇಕಾದ ಆಧಾರ ಮತ್ತು ತತ್ವಗಳನ್ನು ವಿವರಿಸಿರಿ.

Q. No. 4. What is interpleader suit ? Explain the conditions and procedure relating to an interpleader suit. Marks :16

ಅಂತರವಾದ ದಾವೆ ಎಂದರೇನು ? ಅಂತರವಾದ ದಾವೆಗೆ ಸಂಬಂಧಿಸಿದ ಷರತ್ತುಗಳನ್ನು ಮತ್ತು ಪ್ರಕ್ರಿಯೆಗಳನ್ನು ವಿವರಿಸಿರಿ.

P.T.O.

Q. No. 5. What are the pre-conditions and procedure to be followed in institution of suits by or against the Government ? Explain. Marks :16

ಸರಕಾರದಿಂದ ಅಥವಾ ಸರಕಾರದ ವಿರುದ್ಧವಾಗಿ ದಾವೆಗಳನ್ನು ಹೂಡುವಾಗ ಅನುಸರಿಸಬೇಕಾದ ಪೂರ್ವ ಷರತ್ತುಗಳು ಮತ್ತು ಪ್ರಕ್ರಿಯೆಗಳು ಯಾವುವು ? ವಿವರಿಸಿರಿ.

Q. No. 6. What is review ? What are the conditions for exercise of revisional jurisdiction ? Explain. Marks :16

ಪುನರವಲೋಕನ ಎಂದರೇನು ? ಪುನರೀಕ್ಷಣೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಇರುವ ಷರತ್ತುಗಳನ್ನು ವಿವರಿಸಿರಿ.

Q. No. 7. Explain the circumstances in which the delay will be condoned under the Limitation Act. Marks :16

ಕಾಲಪರಿಮಿತಿ ಅಧಿನಿಯಮದಡಿಯಲ್ಲಿ ದಾವೆ ಹೂಡಲು ವಿಳಂಬವಾಗುವುದನ್ನು ಯಾವ ಸಂದರ್ಭಗಳಲ್ಲಿ ಮನ್ನಾ ಮಾಡಲಾಗುವುದೆಂಬುದನ್ನು ವಿವರಿಸಿರಿ.

Q. No. 8. Write short notes on **any two** of the following : Marks : 2×8=16

ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

a) Set-off

ವಜಾವಟ್ಟು

b) Kinds of issues

ವಿವಾದಾಂಶಗಳ ಪ್ರಕಾರಗಳು

c) Admissions

ಒಪ್ಪಿಗೆಗಳು.

Q. No. 9. Solve **any two** of the following problems. Marks :2×10=20

ಕೆಳಗಿನವುಗಳಲ್ಲಿ ಯಾವುದಾದರೂ ಎರಡರ ಸಮಸ್ಯೆಗಳನ್ನು ಪರಿಹರಿಸಿರಿ.

a) Sunil is a permanent resident of Davanagere and Prakash is a permanent resident of Shivamogga. Sunil has taken a loan from Prakash at Davanagere. He has not repaid the loan till today. Prakash has instituted a suit for the recovery of the said loan, against Sunil at Shivamogga. Sunil has raised objection as to the jurisdiction. Decide.

ಸುನೀಲನು ದಾವಣಗೆರೆಯ ಶಾಶ್ವತ ನಿವಾಸಿಯಾಗಿದ್ದು, ಪ್ರಕಾಶನು ಶಿವಮೊಗ್ಗದ ಶಾಶ್ವತ ನಿವಾಸಿಯಾಗಿದ್ದಾನೆ. ಸುನೀಲನು ಪ್ರಕಾಶನಿಂದ ದಾವಣಗೆರೆಯಲ್ಲಿ ಸಾಲವನ್ನು ಪಡೆದಿದ್ದಾನೆ. ಅವನು ಈವರೆಗೂ ಆ ಸಾಲದ ಮರುಪಾವತಿ ಮಾಡಿಲ್ಲ. ಪ್ರಕಾಶನು ಶಿವಮೊಗ್ಗದ ನ್ಯಾಯಾಲಯದಲ್ಲಿ ಸುನೀಲನ ವಿರುದ್ಧ ಸಾಲದ ಮರುಪಾವತಿಗಾಗಿ ದಾವೆಯನ್ನು ಹೂಡಿದ್ದಾನೆ. ಸುನೀಲನು ನ್ಯಾಯಾಧಿಕಾರಣವನ್ನು ಕುರಿತು ಆಕ್ಷೇಪಣೆಯನ್ನೂ ಎತ್ತಿದ್ದಾನೆ. ನಿರ್ಧರಿಸಿರಿ.

b) 'A' sues 'B' in a foreign court. The suit is dismissed. Thereafter 'A' wants to file the same suit against 'B' in India on the same cause of action. Whether he can institute a suit ? Decide.

'A' ಎಂಬುವನು 'B' ನ ವಿರುದ್ಧ ವಿದೇಶಿ ನ್ಯಾಯಾಲಯದಲ್ಲಿ ಒಂದು ದಾವೆ ಹೂಡುತ್ತಾನೆ. ಆ ದಾವೆಯು ವಜಾಗೊಳ್ಳುತ್ತದೆ. ತದನಂತರ 'A' ಯು ಅದೇ ವ್ಯಾಜ್ಯ ಕಾರಣಕ್ಕೆ 'B' ಯ ವಿರುದ್ಧ ಭಾರತದ ನ್ಯಾಯಾಲಯದಲ್ಲಿ ದಾವೆ ಹೂಡಲು ಬಯಸುತ್ತಾನೆ. ಅವನು ಹಾಗೆ ಮಾಡಬಹುದೇ ? ನಿರ್ಣಯಿಸಿರಿ.

c) Right to sue arises to 'P' during his minority. 'P' dies one day after attaining majority. He is succeeded by his son 'K' who is a minor. Determine the effect on the period of limitation.

'P' ನು ಅಪ್ರಾಪ್ತ ವಯಸ್ಕನಾಗಿರುವಾಗ ಆತನಿಗೆ ದಾವೆಯ ಹಕ್ಕು ಉದ್ಭವಿಸುತ್ತದೆ. 'P' ಪ್ರಾಪ್ತ ವಯಸ್ಕನಾದ ಒಂದು ದಿನದ ನಂತರ ಮರಣ ಹೊಂದುತ್ತಾನೆ. ಅವನ ಅಪ್ರಾಪ್ತ ವಯಸ್ಕ ಮಗನಾದ 'K' ಯು ಆತನ ಉತ್ತರಾಧಿಕಾರಿಯಾಗುತ್ತಾನೆ. ಕಾಲಮಿತಿ ಅವಧಿಯ ಮೇಲಿನ ಪರಿಣಾಮವನ್ನು ನಿರ್ಧರಿಸಿರಿ.

**V Semester 3 Year. LL.B./IX Semester 5 Year. B.A.LL.B./B.B.A. LL.B.**
**Examination, June/July 2018**
**CIVIL PROCEDURE CODE AND LIMITATION ACT**

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written either in **English** or **Kannada** completely.

ಸೂಚನೆಗಳು : 1. ಪ್ರಶ್ನೆ ಸಂಖ್ಯೆ **9** ಮತ್ತು ಉಳಿದವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.

2. ಪ್ರ. ಸಂ. **9**ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ ತಲಾ **16** ಅಂಕಗಳು.

3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಅಥವಾ ಕನ್ನಡದಲ್ಲಿ ಬರೆಯಿರಿ.

Q. No. 1. Explain the general rules of pleading. Marks : 16

ವಾದಪತ್ರಗಳ ಸಾಮಾನ್ಯ ನಿಯಮಗಳನ್ನು ವಿವರಿಸಿರಿ.

Q. No. 2. Describe the provisions relating to institution of suit. Marks : 16

ದಾವಾ ಸಲ್ಲಿಸುವಿಕೆಯ ಕುರಿತಾಗಿ ಇರುವ ಉಪಬಂಧಗಳನ್ನು ವಿಸ್ತಾರವಾಗಿ ಹೇಳಿರಿ.

Q. No. 3. What is Res judicata ? Explain the conditions to constitute of Res judicata. Marks : 16

ರೆಸ್ ಜ್ಯುಡಿಕೇಟ ಎಂದರೇನು ? ಒಂದು ವಿಚಾರವನ್ನು ರೆಸ್ ಜ್ಯುಡಿಕೇಟ ಎಂದು ಪರಿಗಣಿಸಲು ಇರುವ ಷರತ್ತುಗಳನ್ನು ವಿವರಿಸಿ.

Q. No. 4. Whether death of a party to a suit abate the legal proceedings ? Explain applying rules under order XXII of CPC 1908. Marks : 16

ದಾವಾ ಪಕ್ಷಗಾರನ ಮರಣದಿಂದ ನ್ಯಾಯಿಕ ಪ್ರಕ್ರಿಯೆಗಳು ಕೊನೆಗೊಳ್ಳುತ್ತದೆಯೇ ? 1908ರ ದಿವಾನಿ ಪ್ರಕ್ರಿಯೆ ಸಂಹಿತೆಯ ಆದೇಶ 22ರಲ್ಲಿನ ನಿಯಮಗಳನ್ನು ಆಧರಿಸಿ ವಿವರಿಸಿ.

Q. No. 5. What is exparte decree ? Explain the grounds for setting aside the exparte decree. Marks : 16

ಏಕ ಪಕ್ಷೀಯ ಆದೇಶ ಎಂದರೇನು ? ಈ ಏಕಪಕ್ಷೀಯ ಆದೇಶವನ್ನು ಯಾವ ಆಧಾರಗಳ ಮೇಲೆ ರದ್ದುಗೊಳಿಸಬಹುದು ಎಂಬುದನ್ನು ವಿವರಿಸಿ.

Q. No. 6. Explain the factors to be considered by the court before granting of temporary injunction. Marks : 16

ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಮಾಡುವ ಮೊದಲು ನ್ಯಾಯಾಲಯವು ಪರಿಗಣಿಸಬಹುದಾದ ಸಂಗತಿಗಳನ್ನು ವಿವರಿಸಿ.

Q. No. 7. "Once the time has began to run, no subsequent disability or inability can stop it". Discuss. Marks : 16

"ಒಮ್ಮೆ ಕಾಲ ಪರಿಮಿತಿ ಪ್ರಾರಂಭವಾದರೆ ತದನಂತರ ಉಂಟಾಗುವ ನಿರ್ಯೋಗ್ಯತೆ ಅಥವಾ ಅಸಮರ್ಥತೆಯಾಗಲಿ ಕಾಲಮಿತಿಯನ್ನು ತಡೆಯಲಾಗುವುದಿಲ್ಲ". ಚರ್ಚಿಸಿ.

Q. No. 8. Write short notes on **any two** of the following : Marks : 2×8=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Adjournment.

ವಿಚಾರಣೆ ಮುಂದೂಡುವಿಕೆ.

(b) Inter-pleader suit.

ಅಂತರ್ ದಾವೆ.

(c) Legal disability under limitation act.

ಕಾಲ ಪರಿಮಿತಿ ಕಾಯಿದೆ ಅಡಿಯಲ್ಲಿ ನ್ಯಾಯಿಕ ನಿರ್ಯೋಗ್ಯತೆ.

Q. No. 9. Solve **any two** of the following problems: Marks : 2×10=20

ಕೆಳಗಿನವುಗಳಲ್ಲಿ ಯಾವುದಾದರೂ **ಎರಡಕ್ಕೆ** ಪರಿಹಾರಾತ್ಮಕ ಉತ್ತರ ಬರೆಯಿರಿ :

(a) 'A' filed suit for partition against his brothers 'B' and 'C'. The court has passed the preliminary decree and final decree in the matter. Being aggrieved by the decree of the court 'A' preferred appeal against final decree and raised question about correctness of the preliminary decree. Whether appeal maintainable ?

Aಯು ತನ್ನ ಅಣ್ಣಂದಿರಾದ B ಮತ್ತು C ವಿರುದ್ಧ ಆಸ್ತಿ ವಿಭಜನೆಗೆ ದಾವಾ ಹೂಡಿದ್ದು, ನ್ಯಾಯಾಲಯವು ಪ್ರಾಥಮಿಕ ಡಿಕ್ರಿ ಮತ್ತು ಅಂತಿಮ ಡಿಕ್ರಿಯನ್ನು ಆದೇಶಿಸಿದೆ. ಈ ಅಂತಿಮ ಡಿಕ್ರಿಯ ವಿರುದ್ಧ Aಯು ಅಪೀಲು ಸಲ್ಲಿಸಿದ್ದು, ಅದರಲ್ಲಿಯೇ ಪ್ರಾಥಮಿಕ ಡಿಕ್ರಿಯ ಕ್ರಮಬದ್ಧತೆಯನ್ನು ಪ್ರಶ್ನಿಸುತ್ತಾನೆ. ಈ ಅಪೀಲು ಸ್ವೀಕಾರಾರ್ಹವೇ ?

(b) Ramesh has borrowed some money from Dinesh and failed to repay it. Dinesh wants to file suit against Ramesh for recovery of money advanced. The last day of limitation was sunday. Therefore he filed suit on immediate next monday and claims for extension of limitation as the last day of limitation was sunday being holiday to the court. Can he succeed ?

ರಮೇಶನು ದಿನೇಶನಿಂದ ಸಾಲವನ್ನು ಪಡೆದಿದ್ದು ಮರುಪಾವತಿ ಮಾಡಲು ವಿಫಲನಾಗಿದ್ದಾನೆ. ರಮೇಶನ ವಿರುದ್ಧ ದಿನೇಶ ದಾವಾ ಹೂಡಲು ಇಚ್ಛಿಸಿದ್ದು, ಕಾಲ ಪರಿಮಿತಿಯ ಕೊನೆಯ ದಿನ ಭಾನುವಾರವಾದ್ದರಿಂದ ತತ್‌ಕ್ಷಣದ ಮರುದಿನ ಸೋಮವಾರ ದಾವಾ ಸಲ್ಲಿಸುತ್ತಾ, ಕಾಲ ಪರಿಮಿತಿಯ ಕೊನೆಯ ದಿನ ನ್ಯಾಯಾಲಯಕ್ಕೆ ಭಾನುವಾರದ ರಜೆ ಇದ್ದುದರಿಂದ ಕಾಲ ಪರಿಮಿತಿಯನ್ನು ವಿಸ್ತರಿಸುವಂತೆ ನ್ಯಾಯಾಲಯದಲ್ಲಿ ಕೇಳಿಕೊಳ್ಳುತ್ತಾನೆ. ಅವನು ಸಫಲನಾಗಬಹುದೇ ?

(c) The suit filed by 'X' is posted for cross examination of the plaintiff. Defendant files application for adjournment on the ground that his counsel is suffering from illness. Rejecting the application, court directs him (defendant) to change the counsel and proceed with cross examination. Whether order of the court is sustainable ?

Xನು ಸಲ್ಲಿಸಿದ್ದ ದಾವೆಯನ್ನು ವಾದಿಯ ಪಾಟೀ ಸವಾಲಿಗೆಂದು ಮುಂದೂಡಲ್ಪಟ್ಟಿತ್ತು. ವಿಚಾರಣಾ ದಿನಾಂಕದಂದು ಪ್ರತಿವಾದಿಯು ತನ್ನ ವಕೀಲರಿಗೆ ಅನಾರೋಗ್ಯವಾದ್ದರಿಂದ ಪ್ರಕರಣವನ್ನು ಮುಂದೂಡುವಂತೆ ಕೋರಿ ಅರ್ಜಿ ಸಲ್ಲಿಸುತ್ತಾನೆ. ಈ ಅರ್ಜಿಯನ್ನು ತಿರಸ್ಕರಿಸುತ್ತಾ ನ್ಯಾಯಾಲಯವು ಪ್ರತಿವಾದಿಗೆ ಬೇರೆ ವಕೀಲರನ್ನು ನೇಮಕ ಮಾಡಿಕೊಂಡು ಪಾಟೀ ಸವಾಲು ಮುಂದುವರಿಸುವಂತೆ ನಿರ್ದೇಶಿಸುತ್ತದೆ. ಈ ಆದೇಶವು ಸಮರ್ಥನೀಯವೇ ?

---

**0501/0901**

# V Semester 3 Year LL.B./IX Semester 5 year B.A., LL.B./B.B.A., LL.B. Examination, December 2017
# CIVIL PROCEDURE CODE AND LIMITATION ACT

Duration : 3 Hours Max. Marks : 100

**Instructions**: 1. Answer Q. No. **9** and **any five** of the remaining questions.
2. Q.No. **9** carries **20** marks and the remaining questions carry **16** marks **each**.
3. Answers should be written **either** in **English** or **Kannada** Completely.

*ಸೂಚನೆಗಳು:* *1. ಪ್ರಶ್ನೆ **9** ಮತ್ತು ಉಳಿದ ಪ್ರಶ್ನೆಗಳಲ್ಲಿ ಯಾವುದೇ ಐದನ್ನು ಉತ್ತರಿಸಿರಿ.*
*2. ಪ್ರಶ್ನೆ **9**ಕ್ಕೆ **20** ಅಂಕಗಳು ಮತ್ತು ಉಳಿದ ಪ್ರಶ್ನೆಗಳಿಗೆ ತಲಾ **16** ಅಂಕಗಳು.*
*3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಬರೆಯಿರಿ.*

Q. No. 1. Explain the provisions of Civil Procedure Code, 1908 in respect of transfer of suits. Marks : 16

ದಾವೆಗಳ ವರ್ಗಾವಣೆಗೆ ಸಂಬಂಧಿಸಿದಂತೆ ಇರುವ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಉಪಬಂಧಗಳನ್ನು ವಿವರಿಸಿರಿ.

Q. No. 2. Describe briefly the different parts of a plaint. Marks : 16

ವಾದಪತ್ರವೊಂದರ ವಿವಿಧ ಭಾಗಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿರಿ.

Q. No. 3. Explain 'Revision'. What are the conditions for exercise of revisional jurisdiction ? Marks : 16

'ಪುನರ್ವಿಮರ್ಶೆ'ಯನ್ನು ವಿವರಿಸಿರಿ. ಪುನರ್ವಿಮರ್ಶೆಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಇರುವ ಷರತ್ತುಗಳೇನು ?

Q. No. 4. What is the procedure for institution of suits by or against partnership firms constituted under the Partnership Act ? Marks : 16

ಪಾಲುದಾರಿಕಾ ಅಧಿನಿಯಮದ ಅಡಿಯಲ್ಲಿ ರಚಿಸಲಾಗಿರುವ ಪಾಲುಗಾರಿಕಾ ಸಂಸ್ಥೆಯ ಪರವಾಗಿ ಅಥವಾ ವಿರುದ್ಧವಾಗಿ ದಾವೆಗಳನ್ನು ಹೂಡಲು ಇರುವ ಪ್ರಕ್ರಿಯೆ ಏನು ?

Q. No. 5. Discuss about 'arrest before judgement'. Marks : 16

'ತೀರ್ಪಿನ ಪೂರ್ವ ದಸ್ತಗಿರಿ'ಯ ಕುರಿತು ಚರ್ಚಿಸಿರಿ.

Q. No. 6. What are the different modes of execution of a decree ? Marks : 16

ಡಿಕ್ರಿಯ ಅಮಲ್ಜಾರಿಯ ವಿವಿಧ ವಿಧಾನಗಳೇನು ?

Q. No. 7. Discuss acknowledgement of debt under the Limitation Act. Marks : 16

ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ಸಾಲ ಸ್ವೀಕೃತಿಯ ಕುರಿತು ಚರ್ಚಿಸಿರಿ.

Q. No. 8. Write short notes on **any two** of the following : Marks : 2×8=16

(a) Set-off

(b) Substantive and Procedural Laws

(c) Adverse Possession.

ಈ ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಕುರಿತು ಲಘು ಟಿಪ್ಪಣಿ ಬರೆಯಿರಿ.

(ಅ) ವಜಾವಟ್ಟು

(ಆ) ಸಾರಭೂತ (ವಿಷಯಾತ್ಮಕ) ಮತ್ತು ಪ್ರಕ್ರಿಯಾತ್ಮಕ ಕಾನೂನುಗಳು

(ಇ) ಪ್ರತಿಕೂಲ ಸ್ವಾಧೀನ.

Q. No. 9. Answer **any two** of the following with reasons : Marks : 2×10=20

(a) Anil has instituted a suit against Suresh for the recovery of a loan alleged to be advanced by him to Suresh. Suresh has appeared in the suit, but has not presented his written statement. Anil contends that not presenting written statement amounts to implied admission of all facts in the plaint. Decide.

ಅನಿಲನು ತಾನು ಸುರೇಶನಿಗೆ ನೀಡಿದ್ದೇನೆಂದು ಹೇಳಿದ ಸಾಲದ ಮರುಪಾವತಿಗಾಗಿ ಸುರೇಶನ ವಿರುದ್ಧ ದಾವೆಯೊಂದನ್ನು ಹೂಡಿದ್ದಾನೆ. ಸುರೇಶನು ಆ ದಾವೆಯಲ್ಲಿ ಹಾಜರಾಗಿದ್ದರೂ ತನ್ನ ಪ್ರತಿವಾದಪತ್ರವನ್ನು ನೀಡಿಲ್ಲ. ಆದ ಕಾರಣ, ಅನಿಲನು ಪ್ರತಿವಾದಿ ಪತ್ರವನ್ನು ನೀಡದೇ ಇರುವದು ತಾನು ವಾದಪತ್ರದಲ್ಲಿ ಹೇಳಿರುವ ಎಲ್ಲ ತಥ್ಯಗಳ ಅವ್ಯಕ್ತ ಅಂಗೀಕಾರವಾಗಿದೆಯೆಂದು ವಾದಿಸುತ್ತಿದ್ದಾನೆ. ನಿರ್ಣಯಿಸಿರಿ.

(b) Ramesh has instituted a suit against Keshav for recovery of loan. While instituting the suit he claimed only the principal amount, omitting the interest by over sight. Now he wants to claim the interest. Advise him.

ರಮೇಶನು ಕೇಶವನ ವಿರುದ್ಧ ಸಾಲದ ಮರುಪಾವತಿಗಾಗಿ ದಾವೆಯೊಂದನ್ನು ಹೂಡಿದ್ದಾನೆ. ದಾವೆಯನ್ನು ಹೂಡುವಾಗ ಅವನು ಕೇವಲ ಅಸಲನ್ನು ಮಾತ್ರ ಕೇಳಿ ಕಣ್ತಪ್ಪಿನಿಂದಾಗಿ ಬಡ್ಡಿಯನ್ನು ಕೇಳಲು ಮರೆತಿದ್ದಾನೆ. ಈಗ ಅವನು ಬಡ್ಡಿಯನ್ನು ಕೇಳಲು ಬಯಸಿದ್ದಾನೆ. ಅವನಿಗೆ ಸಲಹೆ ನೀಡಿರಿ.

(c) Santosh has taken a loan of Rs. 50,000 from City Bank on 10-5-2013. He had a fixed deposit of Rs. 75,000 in the same branch of City Bank, which matured on 16-10-2017. The Bank deposited the proceeds of the fixed deposit in the SB account of Santosh, after deducting the loan amount and interest thereon. Santosh wants to recover the amount so adjusted by the Bank. Advise him.

ಸಂತೋಷನು 10-5-2013ರಂದು ಸಿಟಿ ಬ್ಯಾಂಕಿನಿಂದ ರೂ. 50,000ಗಳ ಸಾಲವನ್ನು ಪಡೆದಿದ್ದಾನೆ. ಅವನು ಆ ಸಿಟಿ ಬ್ಯಾಂಕಿನ ಅದೇ ಶಾಖೆಯಲ್ಲಿ ರೂ. 75,000ಗಳ ನಿಯತ ಠೇವಣಿಯನ್ನು ಹೊಂದಿದ್ದನು. 16-10-2017ರಂದು ಅದರ ಅವಧಿ ಮುಕ್ತಾಯವಾಯಿತು. ಅದರ ಮೊತ್ತದಿಂದ ಸಂತೋಷನು ನೀಡಬೇಕಾದ ಸಾಲದ ಮೊತ್ತವನ್ನು ಬಡ್ಡಿ ಸಮೇತ ಕಡಿತ ಮಾಡಿ ಉಳಿದ ಹಣವನ್ನು ಬ್ಯಾಂಕು ಸಂತೋಷನ ಉಳಿತಾಯ ಖಾತೆಗೆ ಜಮಾ ಮಾಡಿತು. ಈ ರೀತಿ ಕಡಿತ ಮಾಡಿದ ಹಣವನ್ನು ವಸೂಲಿ ಮಾಡಲು ಸಂತೋಷನು ಬಯಸಿದ್ದಾನೆ. ಅವನಿಗೆ ಸಲಹೆ ನೀಡಿರಿ.

SDM LAW LIBRARY

**0501/0901**

**V Semester 3 Years LL.B./IX Semester 5 Year B.A. LL.B./B.B.A. LL.B.**
**Examination, June/July 2017**
**CIVIL PROCEDURE CODE AND LIMITATION ACT**

Duration : 3 Hours Max. Marks : 100

**Instructions** : 1. Answer Q. No. **9** and **any five (5)** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written **either** in **English** or **Kannada** **completely**.

**ಸೂಚನೆಗಳು** : 1. ಪ್ರಶ್ನೆ **9** ನ್ನು ಉತ್ತರಿಸಿ ಹಾಗೂ ಉಳಿದವುಗಳಲ್ಲಿ ಯಾವುದಾದರೂ **5** ಪ್ರಶ್ನೆಗಳಿಗೆ ಉತ್ತರಿಸಿರಿ.

2. ಪ್ರಶ್ನೆ **9** ಕ್ಕೆ **20** ಅಂಕಗಳು ಮತ್ತು ಉಳಿದ ಪ್ರತಿ ಪ್ರಶ್ನೆಗೆ **16** ಅಂಕಗಳು.

3. ಉತ್ತರಗಳನ್ನು ಸಂಪೂರ್ಣವಾಗಿ **ಇಂಗ್ಲೀಷ್**‌ನಲ್ಲಿ ಅಥವಾ **ಕನ್ನಡ**ದಲ್ಲಿ ಬರೆಯಿರಿ.

Q. No. 1. Explain the different kinds of the Jurisdictions of the Civil Court. Marks : 16

ದಿವಾಣಿ ನ್ಯಾಯಾಲಯಗಳ ವಿಭಿನ್ನ ಪ್ರಕಾರದ ನ್ಯಾಯಾಧಿಕಾರಗಳನ್ನು ವಿವರಿಸಿರಿ.

Q. No. 2. Explain the provisions of CPC relating to the parties to the suit, their joinder, misjoinder and non-joinder. Marks : 16

ದಾವೆಯ ಪಕ್ಷಗಾರರು, ಅವರ ಸೇರ್ಪಡೆ, ತಪ್ಪು ಸೇರ್ಪಡೆ ಹಾಗೂ ಸೇರ್ಪಡದಿರುವಿಕೆಗಳ ಕುರಿತಾದ ದಿವಾಣಿ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ವಿವರಿಸಿರಿ.

Q. No. 3. Define the terms judgement and decree and state the difference between the judgement and decree. Marks : 16

ತೀರ್ಪು ಮತ್ತು ಡಿಕ್ರಿ ಪದಗಳನ್ನು ವ್ಯಾಖ್ಯಾನಿಸಿರಿ ಹಾಗೂ ಇವೆರಡರ ನಡುವೆ ಇರುವ ವ್ಯತ್ಯಾಸಗಳನ್ನು ಹೇಳಿರಿ.

Q. No. 4. Explain briefly the general principles of execution of decree. Marks : 16

ಡಿಕ್ರಿಯ ಅಮಲ್ದಾರಿ ಕುರಿತಾದ ಸಾಮಾನ್ಯ ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

SDM LAW LIBRARY



(b) 'A' files suit against 'B' to recover money on a pronote. 'B' contends that the said pronote was obtained from him by undue influence. Can 'B' succeed in his contention. Decide.

ವಾಗ್ದಾನ ಪತ್ರದ ಆಧಾರವೊಂದರ ಮೇಲೆ ಹಣ ವಸೂಲಿಗಾಗಿ 'A' ಯು 'B' ನ ವಿರುದ್ಧ ಹಣ ವಸೂಲಿ ದಾವೆ ಹೂಡುತ್ತಾನೆ. ಈ ವಾಗ್ದಾನ ಪತ್ರವನ್ನು ತನ್ನ ಮೇಲೆ ಅನುಚಿತ ಪ್ರಭಾವ ಬೀರಿ ಬರೆಯಿಸಿಕೊಳ್ಳಲಾಗಿದೆ ಎಂದು 'B' ಯು ವಾದಿಸುತ್ತಾನೆ. ಇದರಲ್ಲಿ 'B' ಯು ಜಯಗಳಿಸುವನೇ ? ನಿರ್ಧರಿಸಿ.

(c) At the time when the cause of action arose, Mr. X was full of age and sound mind. But the fact that he shortly afterwards becomes insane. Can this fact affect the running of time of limitation. Decide.

ವ್ಯಾಜ್ಯ ಕಾರಣ ಉದ್ಭವಿಸಿದ ಸಮಯದಲ್ಲಿ X ಎಂಬಾತನು ಪೂರ್ಣ ವಯಸ್ಕನಾಗಿಯೂ ಮತ್ತು ಸ್ವಸ್ಥ ಮನಸ್ಸಿನವನಾಗಿಯೂ ಇದ್ದನು. ಆದರೆ ಕೆಲವೇ ದಿನಗಳ ನಂತರದಲ್ಲಿ ಅವನು ಮತಿಭ್ರಮಣನಾಗುತ್ತಾನೆ. ಆತನ ಈ ಮತಿಭ್ರಮಣದ ಸಂಗತಿಯು ಕಾಲಮಿತಿಯು ಓಡುವುದನ್ನು ಪರಿಣಮಿಸುವುದೇ ? ನಿರ್ಧರಿಸಿ.

---

SDM Law Library

**0501/0901**

**Fifth Semester 3 Year LL.B./Ninth Semester 5 Year B.A.,LL.B./ B.B.A., LL.B. Examination, December 2016**
**CIVIL PROCEDURE CODE AND LIMITATION ACT**

Duration : 3 Hours Max. Marks : 100

**Instructions**: 1. Answer Q. No. **9** and **any five** of the **remaining**.

2. Q. No. **9** carries **20** marks and the **remaining** questions carry **16** marks **each**.

3. Answers should be written **either** in **English** or **Kannada** **completely**.

**ಸೂಚನೆಗಳು**: ೧. ಪ್ರಶ್ನೆ **9** ಮತ್ತು ಉಳಿದವುಗಳಲ್ಲಿ ಯಾವುದೇ ಐದು ಪ್ರಶ್ನೆಗಳನ್ನು ಉತ್ತರಿಸಿರಿ.

೨. ಪ್ರಶ್ನೆ **9** ಕ್ಕೆ **20** ಅಂಕಗಳು ಹಾಗೂ ಉಳಿದ ಪ್ರಶ್ನೆಗಳಿಗೆ ತಲಾ **16** ಅಂಕಗಳು.

೩. ಉತ್ತರಗಳನ್ನು ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಬರೆಯಬೇಕು.

Q. No. 1. Discuss the provisions of CPC relating to place of suing. Marks : 16

ದಾವಾ ಹೂಡಿಕೆಯ ಸ್ಥಳವನ್ನು ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆಯಲ್ಲಿನ ಉಪಬಂಧಗಳನ್ನು ಚರ್ಚಿಸಿರಿ.

Q. No. 2. What is a written statement ? What should it contain ? Marks : 16

ಪ್ರತಿವಾದ ಪತ್ರವೆಂದರೇನು ? ಅದು ಏನನ್ನು ಒಳಗೊಂಡಿರಬೇಕು ?

Q. No. 3. What is an ex-parte decree ? What are the remedies available against an ex-parte decree ? Marks : 16

ಏಕತರ್ಫಿ ಡಿಕ್ರಿ ಎಂದರೇನು ? ಏಕತರ್ಫಿ ಡಿಕ್ರಿಯನ್ನು ಕುರಿತು ಇರುವ ಪರಿಹಾರಗಳೇನು ?

Q. No. 4. What are issues ? Explain how they are framed, amended and struck off. Marks : 16

ವಿವಾದಾಂಶಗಳೆಂದರೇನು ? ಅವುಗಳನ್ನು ಹೇಗೆ ರಚಿಸಲಾಗುತ್ತದೆ, ತಿದ್ದುಪಡಿ ಮಾಡಲಾಗುತ್ತದೆ ಹಾಗೂ ತೆಗೆದುಹಾಕಲಾಗುತ್ತದೆ ಎಂಬುದನ್ನು ವಿವರಿಸಿರಿ.

SDM Law Library



Q. No. 5. Who are the parties to a suit ? Discuss joinder of parties and effect of non-joinder. Marks : 16

ಒಂದು ದಾವೆಯ ಪಕ್ಷಗಾರರು ಯಾರು ? ಪಕ್ಷಗಾರರ ಸೇರ್ಪಡೆ ಮತ್ತು ಸೇರ್ಪಡಿಸದಿರುವಿಕೆಯ ಪರಿಣಾಮಗಳನ್ನು ಚರ್ಚಿಸಿರಿ.

Q. No. 6. What is the procedure for institution of suit by an indigent person ? Marks : 16

ನಿರ್ಧನ ವ್ಯಕ್ತಿಯೊಬ್ಬನು ದಾವೆಯನ್ನು ಹೂಡಲು ಅನುಸರಿಸಬೇಕಾದ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 7. Explain the provisions of the Limitation Act in respect of condonation of delay. Marks : 16

ವಿಳಂಬವನ್ನು ಮನ್ನಿಸುವುದರ ಕುರಿತು ಕಾಲಪರಿಮಿತಿ ಅಧಿನಿಯಮದ ಉಪಬಂಧಗಳನ್ನು ವಿವರಿಸಿರಿ.

Q. No. 8. Write notes on **any two** of the following : Marks : 2×8= 16

a) Stay of suits
b) Interlocutory applications
c) Prescription.

ಈ ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ :

a) ದಾವೆಯ ತಡೆಯ ನಿಯಮ
b) ಮಧ್ಯಂತರ ಅರ್ಜಿಗಳು
c) ದೀರ್ಘಕಾಲದ ಭೋಗಾಧಿಕಾರ.

Q. No. 9 . Answer **any two** of the following : Marks : 2×10=20

ಯಾವುದಾದರೂ ಎರಡಕ್ಕೆ ಉತ್ತರಿಸಿ :

a) Subhash is a permanent resident of Ballary and Anand is a permanent resident of Kolar. Subhash has made an agreement with Anand at Ballary for supply of certain quantity of paper every month. The parties to the agreement have agreed that if any dispute arises between them, the same shall be subject to the jurisdiction of Civil Court at Tumkur. Decide the validity of the agreement.

ಸುಭಾಷನು ಬಳ್ಳಾರಿಯ ಶಾಶ್ವತ ನಿವಾಸಿಯಾಗಿದ್ದಾನೆ. ಆನಂದನು ಕೋಲಾರದ ಶಾಶ್ವತ ನಿವಾಸಿಯಾಗಿದ್ದಾನೆ. ಪ್ರತಿ ತಿಂಗಳು ಒಂದು ನಿರ್ದಿಷ್ಟ ಪ್ರಮಾಣದ ಕಾಗದವನ್ನು ಪೂರೈಸುವುದಾಗಿ ಸುಭಾಷನು ಆನಂದನೊಂದಿಗೆ ಬಳ್ಳಾರಿಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾನೆ. ಇಬ್ಬರ ನಡುವೆ ಯಾವುದೇ ತಗಾದೆ ಉದ್ಭವಿಸಿದ್ದಲ್ಲಿ ಅದು ತುಮಕೂರಿನ ದಿವಾನಿ ನ್ಯಾಯಾಲಯದ ನ್ಯಾಯಾಧಿಕರಣಕ್ಕೆ ಒಳಪಡಬೇಕು ಎಂದು ಈ ಒಪ್ಪಂದದ ಪಕ್ಷಗಾರರು ಒಪ್ಪಿದ್ದಾರೆ. ಈ ಒಪ್ಪಂದದ ಊರ್ಜಿತತೆಯನ್ನು ನಿರ್ಣಯಿಸಿರಿ.

b) Mahesh has sued Anirudh for defamation. Mahesh died during the pendency of the suit. LRs (Legal heirs) of Mahesh have made an application for being impleaded as plaintiffs. Decide.

ಮಹೇಶನು ಅನಿರುದ್ಧನ ವಿರುದ್ಧ ಮಾನಹಾನಿಗಾಗಿ ಒಂದು ದಾವೆಯನ್ನು ಹೂಡಿದ್ದಾನೆ. ಈ ದಾವೆಯು ಇತ್ಯರ್ಥವಾಗುವ ಮುಂಚೆಯೇ ಮಹೇಶನು ನಿಧನಹೊಂದಿದ್ದಾನೆ. ಮಹೇಶನ ಕಾನೂನು ಸಮ್ಮತ ಪ್ರತಿನಿಧಿಗಳು ತಮ್ಮನ್ನು ಈ ದಾವೆಯಲ್ಲಿ ವಾದಿಗಳೆಂದು ಸೇರ್ಪಡಿಸಿಕೊಳ್ಳಲು ಅರ್ಜಿಯನ್ನು ಮಾಡಿದ್ದಾರೆ. ನಿರ್ಣಯಿಸಿರಿ.

c) Ramesh has taken a loan of Rs. 50,000 from Ashok on 20-10-2010. He has not repaid the loan till today. Ashok has instituted a suit against Ramesh for the recovery of the said loan, on 15-9-2015. Ramesh has not raised any objection regarding limitation, in his written statement. Can the Court hear and decide the suit ?

ರಮೇಶನು 20-10-2010 ರಂದು ಅಶೋಕನಿಂದ ಸಾಲವಾಗಿ ರೂ. 50,000 ಗಳನ್ನು ಪಡೆದುಕೊಂಡಿದ್ದಾನೆ. ಈವರೆಗೆ ಅವನು ಅದನ್ನು ಮರುಪಾವತಿ ಮಾಡಿಲ್ಲ. ಆ ಸಾಲದ ವಸೂಲಿಗಾಗಿ ಅಶೋಕನು ರಮೇಶನ ವಿರುದ್ಧ 15-9-2015 ರಂದು ಒಂದು ದಾವೆಯನ್ನು ಹೂಡಿದ್ದಾನೆ. ರಮೇಶನು ತನ್ನ ಪ್ರತಿವಾದ ಪತ್ರದಲ್ಲಿ ಕಾಲಪರಿಮಿತಿಯನ್ನು ಕುರಿತು ಯಾವುದೇ ಆಕ್ಷೇಪಣೆಯನ್ನು ಮಾಡಿಲ್ಲ. ನ್ಯಾಯಾಲಯವು ಈ ದಾವೆಯನ್ನು ಸುನಾವಣೆ ಮಾಡಿ ನಿರ್ಣಯಿಸಬಹುದೇ ?

SDM LAW LIBRARY

**0501/0901**

## V Semester 3 Year LL.B. / IX Semester 5 Year B.A.LL.B./B.B.A. LL.B. Examination, June/July 2016
## CPC AND LIMITATION ACT

Duration : 3 Hours Max. Marks : 100

**Instructions** : 1. Answer Q. No. **9** and **any five (5)** of the remaining questions.
2. Q. No.**9** carries **20** marks and the remaining questions carry **16** marks **each**.
3. Answer should be written **either** in English/Kannada **completely**.

ಸೂಚನೆಗಳು : 1. ಪ್ರಶ್ನೆ **9** ನ್ನು ಉತ್ತರಿಸಿ ಹಾಗೂ ಉಳಿದವುಗಳಲ್ಲಿ ಯಾವುದಾದರೂ **5** ಪ್ರಶ್ನೆಗಳಿಗೆ ಉತ್ತರಿಸಿರಿ.
2. ಪ್ರಶ್ನೆ **9** ಕ್ಕೆ **20** ಅಂಕಗಳು ಮತ್ತು ಉಳಿದ ಪ್ರತಿ ಪ್ರಶ್ನೆಗೆ **16** ಅಂಕಗಳು.
3. ಉತ್ತರಗಳನ್ನು ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ / ಕನ್ನಡದಲ್ಲಿ ಬರೆಯಿರಿ.

Q. No. 1. What is Suit ? Write about the suits of civil nature with examples.
ದಾವೆ ಎಂದರೇನು ? ದಿವಾಣಿ ಸ್ವರೂಪದ ದಾವೆಗಳ ಕುರಿತು ಉದಾಹರಣೆಗಳೊಂದಿಗೆ ಬರೆಯಿರಿ.

Q. No. 2. Discuss about the fundamental rules of pleading.
ಪ್ಲೀಡಿಂಗ್‌ದ ಮೂಲಭೂತ ನಿಯಮಗಳ ಕುರಿತು ಚರ್ಚಿಸಿರಿ.

Q. No. 3. Discuss the CPC provisions relating to the Appeals.
ಅಪೀಲುಗಳ ಕುರಿತಾದ ದಿವಾಣಿ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ಚರ್ಚಿಸಿರಿ.

Q. No. 4. Explain the suits of particular cases with special reference to the suits by or against the government.
ಸರ್ಕಾರದಿಂದ ಅಥವಾ ಸರ್ಕಾರದ ವಿರುದ್ಧದ ದಾವೆಗಳಿಗೆ ವಿಶೇಷ ಒತ್ತುಕೊಟ್ಟಂತೆ ವಿಶಿಷ್ಟ ರೀತಿಯ ದಾವೆಗಳ ಕುರಿತು ವಿವರಿಸಿರಿ.

SDM LAW LIBRARY



Q. No. 5. Explain the CPC provisions relating to the temporary injunctions.

ತಾತ್ಕಾಲಿಕ ನಿರ್ಬಂಧಕಾಜ್ಞೆಯ ಕುರಿತಾಗಿ ದಿವಾಣಿ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ವಿವರಿಸಿರಿ.

Q. No. 6. Briefly describe the different parts of a plaint.

ದಾವಾ ಪತ್ರದ ವಿವಿಧ ಭಾಗಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿರಿ.

Q. No. 7. What is legal disability ? Discuss the provisions in Limitation Act affording protection under such disability.

ಕಾನೂನಿನ ಅನರ್ಹತೆ ಎಂದರೇನು ? ಕಾಲಮಿತಿ ಅಧಿನಿಯಮದಲ್ಲಿ ಇಂತಹ ಅನರ್ಹತೆಗೆ ಇರುವ ರಕ್ಷಣೆಯ ಉಪಬಂಧಗಳನ್ನು ಚರ್ಚಿಸಿರಿ.

Q. No. 8. Write short notes on **any two** of the following :

ಕೆಳಗಿನವುಗಳಲ್ಲಿ ಬೇಕಾದ ಎರಡಕ್ಕೆ ಲಘು ಟಿಪ್ಪಣಿಸಿರಿ :

(a) Resjudicata

ಪೂರ್ವನ್ಯಾಯ

(b) Caveat

ಎಚ್ಚರಿಕಾ ಪತ್ರ

(c) Indigent Person.

ನಿರ್ಧನಿಕ ವ್ಯಕ್ತಿ.

Q. No. 9. Solve **any two** of the following : Marks : 2×10=20

ಕೆಳಗಿನವುಗಳಲ್ಲಿ **2**ಕ್ಕೆ ಉತ್ತರಿಸಿರಿ :

(a) 'A' residing in Delhi publishes in Calcutta statements of defamatory to B. The news paper is circulated in Bombay, Madras and Raipur. B wants to file a suit against A. Where he can sue ? Advise him.

ದಹಲಿಯಲ್ಲಿ ವಾಸವಿರುವ 'A'ಯು 'B' ನ ವಿರುದ್ಧ ಕಲ್ಕತ್ತಾದಲ್ಲಿ ಮಾನಹಾನಿಕರ ಹೇಳಿಕೆಗಳನ್ನು ಪ್ರಕಟಿಸುತ್ತಾನೆ. ಈ ಹೇಳಿಕೆಯನ್ನೊಳಗೊಂಡ ದಿನಪತ್ರಿಕೆಯು ಬಾಂಬೆ, ಮದ್ರಾಸ್ ಮತ್ತು ರಾಯ್‌ಪುರದಲ್ಲಿ ಪ್ರಕಟಗೊಳ್ಳುತ್ತದೆ. 'B'ಯು 'A' ನ ವಿರುದ್ಧ ದಾವೆ ಹೂಡಲು ಬಯಸುತ್ತಾನೆ. ಹಾಗಾದರೆ ಅವನು ಯಾವ ಸ್ಥಳದಲ್ಲಿ ದಾವೆ ಹೂಡಬೇಕೆಂಬುದರ ಬಗ್ಗೆ 'B' ಗೆ ಸಲಹಿಸಿ.

SDM LAW LIBRARY



(b) 'A' enters into an agreement jointly with B and C to sell 100 tins of oil. A thereafter refuses to deliver the goods. 'B' and 'C' together want to file a suit for damages against 'A'. Can they do so ? Advise them.

'A'ಎಂಬಾತನು 100 ಎಣ್ಣೆ ಡಬ್ಬಿಗಳನ್ನು ಮಾರಾಟಮಾಡುವುದಾಗಿ 'B' ಮತ್ತು 'C' ಎಂಬಿಬ್ಬರೊಂದಿಗೆ ಜಂಟಿಯಾಗಿ ಒಂದು ಒಪ್ಪಂದ ಮಾಡಿಕೊಳ್ಳುತ್ತಾನೆ. ತದನಂತರ 'A' ಯು ಆ ಎಣ್ಣೆ ಡಬ್ಬಿಗಳನ್ನು ಅವರಿಗೆ ಕೊಡಲು ನಿರಾಕರಿಸುತ್ತಾನೆ. ತಮಗಾದ ಹಾನಿಗಾಗಿ 'B' ಮತ್ತು 'C'ಯು 'A'ನ ವಿರುದ್ಧ ಜಂಟಿಯಾಗಿಯೇ ದಾವೆ ಹಾಕಲು ಬಯಸುತ್ತಾರೆ. ಅವರು ಹಾಗೆ ಮಾಡಬಹುದೇ ? ಸಲಹೆ ನೀಡಿರಿ.

(c) A wants to file a suit against B. As the court was closed due to the holiday and that being the last day of the limitation; he could not file the suit.

Mr. A seeks extension of limitation period – will he succeed ?

'A'ಯು 'B'ಯ ವಿರುದ್ಧ ಒಂದು ದಾವೆ ಹೂಡಲು ಬಯಸುತ್ತಾನೆ. ಆದರೆ ಆ ದಿನದಿಂದೇ ನ್ಯಾಯಾಲಯವು ರಜಾ ದಿನವಿರುವ ಕಾರಣ ಮುಚ್ಚಿರುತ್ತದೆ ಮತ್ತು ಅದೇ ದಿನವೇ ಆ ದಾವೆ ಹಾಕುವಿಕೆಗೆ ಕೊನೆಯ ದಿನವೂ ಆಗಿರುತ್ತದೆ. ಇದೇ ರಜಾದಿನದ ಕಾರಣದಿಂದಾಗಿ ತನಗೆ ದಾವೆ ಹಾಕಲು ಆಗಲಿಲ್ಲವೆಂಬ ಕಾರಣ ಮುಂದೆ ಮಾಡಿ ಕಾಲಮಿತಿಯ ವಿಸ್ತರಣೆಗಾಗಿ ಕೋರಿಕೊಳ್ಳುತ್ತಾನೆ. –'A' ನು ಜಯಗಳಿಸುವನೇ ?

SDM LAW COLLEGE LIBRARY

(5)

**0501/0901**

## V Semester 3 Yr. LL.B./IX Semester 5 Yr. B.A.LL.B./B.B.A.LL.B. Examination, December 2015
## CIVIL PROCEDURE CODE AND LIMITATION ACT

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining.

2. Q. No. **9** carries **20** marks and the remaining questions carry **16** marks **each**.

3. Answers should be written **either** in **English** or **Kannada completely**.

ಸೂಚನೆಗಳು : ೧) ಪ್ರಶ್ನೆ **9** ಮತ್ತು ಉಳಿದವುಗಳಲ್ಲಿ ಯಾವುದೇ **ಐದು** ಪ್ರಶ್ನೆಗಳನ್ನು ಉತ್ತರಿಸಿರಿ.

೨) ಪ್ರಶ್ನೆ **9** ಕ್ಕೆ **20** ಅಂಕಗಳು ಹಾಗೂ ಉಳಿದ ಪ್ರಶ್ನೆಗಳಿಗೆ ತಲಾ **16** ಅಂಕಗಳು.

೩) ಉತ್ತರಗಳನ್ನು ಸಂಪೂರ್ಣವಾಗಿ **ಇಂಗ್ಲೀಷ್‌ನಲ್ಲಿ** ಅಥವಾ **ಕನ್ನಡದಲ್ಲಿ** ಬರೆಯಿರಿ.

Q. No. 1. Discuss the rules in C.P.C. relating to transfer of suits. Marks : 16

ದಾವೆಗಳ ವರ್ಗಾವಣೆಗೆ ಕುರಿತಂತೆ ದಿವಾಣಿ ಪ್ರಕ್ರಿಯಾ ಸಂಹಿತೆಯಲ್ಲಿರುವ ನಿಯಮಗಳನ್ನು ಚರ್ಚಿಸಿರಿ.

Q. No. 2. Briefly describe the different parts of a plaint. Marks : 16

ದಾವಾ ಪತ್ರದ ವಿವಿಧ ಭಾಗಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿರಿ.

Q. No. 3. Explain the different modes of service of summons. Marks : 16

ಸಮನ್ಸ್‌ನ್ನು ಜಾರಿಗೊಳಿಸುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 4. What are the different modes of executing a decree in a money suit ? Marks : 16

ಹಣಕಾಸಿನ ಡಿಕ್ರಿಯನ್ನು ಅಮಲ್ಜಾರಿಗೊಳಿಸುವ ವಿವಿಧ ವಿಧಾನಗಳು ಯಾವುವು ?

Q. No. 5. What is a commission ? What are the circumstances in which a commission may be appointed ? Marks : 16

ಆಯೋಗವೆಂದರೇನು ? ಯಾವ ಸಂದರ್ಭಗಳಲ್ಲಿ ಆಯೋಗವನ್ನು ನಿಯಮಿಸಲಾಗುತ್ತದೆ ?

SDM LAW COLLEGE LIBRARY



Q. No. 6. What is revision ? How does it differ from an appeal ? Marks : 16

ಪುನರ್ವಿಮರ್ಶೆ ಎಂದರೇನು ? ಅದು ಮೇಲ್ಮನವಿಯಿಂದ ಹೇಗೆ ಭಿನ್ನವಾಗಿದೆ ?

Q. No. 7. What is an acknowledgement of debt ? What is its effect on limitation ? Marks : 16

ಋಣದ ಸ್ವೀಕೃತಿ ಎಂದರೇನು ? ಕಾಲ ಪರಿಮಿತಿಯ ಮೇಲೆ ಅದರ ಪರಿಣಾಮವೇನು ?

Q. No. 8. Write notes on **any two** of the following : Marks : 2×8=16

(a) Bar on jurisdiction

(b) Set off and counter claim

(c) Condonation of delay.

ಈ ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ:

(a) ನ್ಯಾಯಾಧಿಕರಣದ ಮೇಲೆ ಪ್ರತಿಬಂಧ

(b) ವಜಾವಟ್ಟು ಮತ್ತು ಪ್ರತಿಹಕ್ಕು

(c) ವಿಳಂಬವನ್ನು ಮನ್ನಿಸುವಿಕೆ.

Q. No. 9. Answer **any two** of the following : Marks : 2×10=20

ಈ ಕೆಳಗಿನವುಗಳಲ್ಲಿ ಯಾವುದೇ **ಎರಡನ್ನು** ಉತ್ತರಿಸಿರಿ:

(a) Ramesh is a permanent resident of Belagavi and Ashok is a permanent resident of Dharwad. Ramesh has taken a loan from Ashok at Belagavi. He has not repaid the loan till today. Ashok has instituted a suit for the recovery of the said loan, against Ramesh at Dharwad. Ramesh has raised objection as to the jurisdiction. Decide.

ರಮೇಶನು ಬೆಳಗಾವಿಯ ಶಾಶ್ವತ ನಿವಾಸಿಯಾಗಿದ್ದು ಅಶೋಕನು ಧಾರವಾಡದ ಶಾಶ್ವತ ನಿವಾಸಿಯಾಗಿದ್ದಾನೆ. ರಮೇಶನು ಅಶೋಕನಿಂದ ಬೆಳಗಾವಿಯಲ್ಲಿ ಸಾಲವನ್ನು ಪಡೆದಿದ್ದಾನೆ. ಅವನು ಈವರೆಗೂ ಆ ಸಾಲದ ಮರುಪಾವತಿ ಮಾಡಿಲ್ಲ. ಅಶೋಕನು ಧಾರವಾಡದ ನ್ಯಾಯಾಲಯದಲ್ಲಿ ರಮೇಶನ ವಿರುದ್ಧ ಸಾಲದ ಮರುಪಾವತಿಗಾಗಿ ದಾವೆಯೊಂದನ್ನು ಹೂಡಿದ್ದಾನೆ. ರಮೇಶನು ನ್ಯಾಯಾಧೀಕರಣವನ್ನು ಕುರಿತು ಆಕ್ಷೇಪಣೆಯನ್ನು ಎತ್ತಿದ್ದಾನೆ. ನಿರ್ಧರಿಸಿರಿ.

SDM LAW COLLEGE LIBRARY


(b) Mahesh had sued Anirudh for defamation. The suit was decided in favour of Mahesh. Anirudh has preferred an appeal against the judgement of trial court. Mahesh died during the pendency of appeal. LRs of Mahesh have applied for being impleaded as respondents. Decide.

ಮಹೇಶನು ಅನಿರುದ್ಧನ ವಿರುದ್ಧ ಮಾನಹಾನಿಗಾಗಿ ದಾವೆಯನ್ನು ಹೂಡಿದ್ದನು. ಆ ದಾವೆಯು ಮಹೇಶನ ಪರವಾಗಿ ಇತ್ಯರ್ಥವಾಗಿತ್ತು. ನ್ಯಾಯಾಲಯದ ಆದೇಶದ ವಿರುದ್ಧ ಅನಿರುದ್ಧನು ಮೇಲ್ಮನವಿಯನ್ನು ಮಾಡಿದ್ದಾನೆ. ಮೇಲ್ಮನವಿಯು ಇತ್ಯರ್ಥವಾಗುವ ಮುಂಚೆಯೇ ಮಹೇಶನು ನಿಧನಹೊಂದಿದ್ದಾನೆ. ಮಹೇಶನ ಕಾನೂನು ಸಮ್ಮತ ಪ್ರತಿನಿಧಿಗಳು ತಮ್ಮನ್ನು ಎದುರುಗಾರರೆಂದು ಸೇರ್ಪಡೆಕೊಳ್ಳಬೇಕೆಂದು ಅರ್ಜಿಯನ್ನು ಮಾಡಿದ್ದಾರೆ. ನಿರ್ಧರಿಸಿರಿ.

(c) Ketan is a tenant in the house of Sameer for last 30 years. Sameer is now in need of the house for his own occupation. He has filed a petition for eviction against Ketan. Ketan contends that he has become owner by adverse possession. Decide.

ಕೇತನನು ಕಳೆದ 30 ವರ್ಷಗಳಿಂದ ಸಮೀರನ ಮನೆಯಲ್ಲಿ ಬಾಡಿಗೆದಾರನಾಗಿದ್ದಾನೆ. ಈ ಸಮೀರನಿಗೆ ತನ್ನ ಸ್ವಂತ ವಾಸಕ್ಕಾಗಿ ಆ ಮನೆಯು ಅವಶ್ಯಕತೆಯುಂಟಾಗಿದೆ. ಅವನು ಕೇತನನ ವಿರುದ್ಧ ಮನೆಯನ್ನು ಖಾಲಿಮಾಡಲು ಅರ್ಜಿಯನ್ನು ಮಾಡಿದ್ದಾನೆ. ಕೇತನನು ತಾನು ಪ್ರತಿಕೂಲ ಕಬ್ಜೆಯಿಂದ ಮನೆಯ ಒಡೆಯನಾಗಿರುವುದಾಗಿ ವಾದಿಸುತ್ತಾನೆ. ನಿರ್ಧರಿಸಿರಿ.

**0501/0901**

**Fifth Semester Three Years LL.B./Ninth Semester Five Years B.A.LL.B./ B.B.A.LL.B. Examination, June/July 2015**

# CIVIL PROCEDURE CODE AND LIMITATION ACT

Duration : 3 Hours                                                                                   Max. Marks : 100

**Instructions** : 1. Answer Q. No. **9** and **any 5** of the remaining questions.

2. Q. No. **9** carries **20** marks and the remaining question carries **16** marks **each**.

3. Answers should be written either in **English** or **Kannada completely**.

ಸೂಚನೆ : 1. ಪ್ರಶ್ನೆ **9** ನ್ನು ಉತ್ತರಿಸಿ. ಹಾಗೂ ಉಳಿದ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.

2. ಪ್ರಶ್ನೆ **9** ಕ್ಕೆ **20** ಅಂಕಗಳು ಹಾಗೂ ಉಳಿದ ಪ್ರತಿ ಪ್ರಶ್ನೆಗೆ **16** ಅಂಕಗಳು.

3. ಉತ್ತರಗಳನ್ನು ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಬರೆಯಬೇಕು.

Q. No. 1. Explain the doctrine of Res-judicata. State its objects and principles. Marks : 16

ಪೂರ್ವ ನ್ಯಾಯ ಸಿದ್ಧಾಂತವನ್ನು ವಿವರಿಸಿ. ಇದರ ಉದ್ದೇಶ ಮತ್ತು ತತ್ತ್ವಗಳನ್ನು ತಿಳಿಸಿ.

Q. No. 2. "Every suit shall include the whole claim in respect of the cause of action". Comment with illustration. Marks : 16

''ಪ್ರತಿಯೊಂದು ದಾವೆಯು ವ್ಯಾಜ್ಯ ಕಾರಣದ ಸರ್ವಸ್ವ ಬೇಡಿಕೆಯನ್ನು ಹೊಂದಿರಬೇಕು''. ದೃಷ್ಟಾಂತಗಳೊಂದಿಗೆ ಚರ್ಚಿಸಿ.

Q. No. 3. Define foreign judgement. When shall it be conclusive and state the presumption relating to foreign judgement. Marks : 16

ವಿದೇಶಿ ತೀರ್ಪನ್ನು ಪರಿಭಾಷಿಸಿ, ಇದು ಯಾವಾಗ ನಿರ್ಣಾಯಕ ರೂಪ ತಾಳುತ್ತದೆ ಮತ್ತು ವಿದೇಶಿ ತೀರ್ಪುಗಳಿಗೆ ಸಂಬಂಧಿಸಿದಂತೆ ಪೂರ್ವಭಾವನೆಗಳು ಯಾವುವು ?

Q. No. 4. What is attachment ? Explain the properties which are not liable for attachment and sale in execution of a decree. Marks : 16

ಜಪ್ತಿ ಎಂದರೇನು ? ಡಿಕ್ರಿ ಜಾರಿಯಲ್ಲಿ ಜಪ್ತಿ ಹಾಗೂ ಮಾರಾಟ ಮಾಡಲಾಗದ ಸ್ವತ್ತುಗಳು ಯಾವುವು ? ವಿವರಿಸಿ.

Q. No. 5. What is interpleader suit ? State the conditions that must be satisfied for filing interpleader suit and who cannot file this interpleader suit ? Marks : 16

ಅಂತರ್ವಾದ ದಾವೆ ಎಂದರೇನು ? ಅಂತರ್ವಾದ ದಾವೆ ಹಾಕಲು ಬೇಕಾದ ಷರತ್ತುಗಳಾವುದೆಂದು ತಿಳಿಸಿ ಹಾಗೂ ಯಾರು ಈ ಅಂತರ್ವಾದ ದಾವೆಯನ್ನು ಹಾಕಲಾಗುವುದಿಲ್ಲ.

Q. No. 6. Explain the term reference. State the circumstances on which reference can be made and how does it differ from Review. Marks : 16

ಉಲ್ಲೇಖ ಏನೆಂಬುವುದನ್ನು ವಿವರಿಸಿ. ಯಾವ ಸಂದರ್ಭಗಳಲ್ಲಿ ಉಲ್ಲೇಖವನ್ನು ಮಾಡಬಹುದು ಹಾಗೂ ಉಲ್ಲೇಖವು ಪರಾಮರ್ಶೆಯಿಂದ ಹೇಗೆ ಭಿನ್ನವಾಗಿದೆ.

Q. No. 7. "Once the time has began to run, no subsequent disability or inability can stop it". Discuss. Marks : 16

"ಒಮ್ಮೆ ಕಾಲಮಿತಿ ಪ್ರಾರಂಭವಾದರೆ ತದನಂತರ ಉಂಟಾಗುವ ನಿಯೋಗ್ಯತೆಯಾಗಲಿ ಅಥವಾ ಅಸಮರ್ಥತೆಯಾಗಲಿ ಅದನ್ನು ನಿಲ್ಲಿಸಲಾಗುವುದಿಲ್ಲ". ಚರ್ಚಿಸಿ.

Q. No. 8. Write short notes on **any two** of the following : Marks : 2×8=16

ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ:

a) Garnishee order

ಗಾರ್ನಿಶಿ ಆದೇಶ (ಸಾಲಗಾರನ ಸಾಲಿಗ)

b) Summons

ಸಮನ್ಸ್

c) Inherent powers of court.

ಅಂತರ್-ನಿರ್ಹಿತ ಅಧಿಕಾರ.

SDM Law Library

# Fifth Semester 3 Years LL.B./IX Semester B.A. LL.B./B.B.A. LL.B. (5 Years) Examination, December 2014
## CPC & LIMITATION ACT

Duration : 3 Hours Max. Marks : 100

**Instructions**: 1. Answer question No. **9** and **any five (5)** of the remaining questions.

2. Q. No. **9** carries **20** marks and the remaining questions carry **16** marks **each**.

3. Answer should be written **either** in **English** or **Kannada** completely.

**ಸೂಚನೆಗಳು:** 1. ಪ್ರಶ್ನೆ **9**ನ್ನು ಉತ್ತರಿಸಿ, ಹಾಗೂ ಉಳಿದ ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.

2. ಪ್ರಶ್ನೆ **9**ಕ್ಕೆ **20** ಅಂಕಗಳು ಹಾಗೂ ಉಳಿದ ಪ್ರತಿ ಪ್ರಶ್ನೆಗೆ **16** ಅಂಕಗಳು.

3. ಉತ್ತರಗಳನ್ನು **ಸಂಪೂರ್ಣವಾಗಿ** ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಬರೆಯಿರಿ.

Q. No. 1. "Every suit shall be Instituted in the court of lowest grade competent to try it". Comment.
"ಪ್ರತಿಯೊಂದು ದಾವೆಯನ್ನು ಅತಿ ಕೆಳಗಿನ ಅಧಿಕಾರಯುಕ್ತ ನ್ಯಾಯಾಲಯದಲ್ಲಿ ಹೂಡಬೇಕು". ಚರ್ಚಿಸಿ.

Q. No. 2. Explain the general and other rules of pleading.
ವಿಜ್ಞಾಪನ ಪತ್ರದ ಸಾಮಾನ್ಯ ಹಾಗೂ ಇತರೆ ನಿಯಮಗಳನ್ನು ವಿವರಿಸಿ.

Q. No. 3. Explain the consequences of appearance and non-appearance of parties in a suit.
ದಾವೆಯಲ್ಲಿ ಪಕ್ಷಗಾರರ ಹಾಜರಾತಿ ಮತ್ತು ಗೈರುಹಾಜರಾತಿಯಿಂದ ಆಗುವ ಪರಿಣಾಮಗಳನ್ನು ವಿವರಿಸಿ.

Q. No. 4. What is injunction ? State the grounds and procedure for issuing a order of temporary injunction.
ತಡೆಯಾಜ್ಞೆ ಎಂದರೇನು ? ತಾತ್ಕಾಲಿಕ ತಡೆಯಾಜ್ಞೆಯನ್ನು ಹೊರಡಿಸಲು ಅನುಸರಿಸಬೇಕಾದ ಆಧಾರ ಮತ್ತು ಪ್ರಕ್ರಿಯೆಗಳನ್ನು ತಿಳಿಸಿ.

Q. No. 5. State the purpose for which receiver can be appointed. What are the powers and function of receiver and when they can be removed ?
ರಿಸೀವರ್ ಅನ್ನು ನೇಮಕ ಮಾಡುವ ಉದ್ದೇಶಗಳನ್ನು ತಿಳಿಸಿ. ರಿಸೀವರ್‌ನ ಅಧಿಕಾರ ಮತ್ತು ಕರ್ತವ್ಯಗಳು ಯಾವುವು ಹಾಗೂ ಇವರ ನೇಮಕಾತಿಯನ್ನು ಹೇಗೆ ತೆಗೆದುಹಾಕಬಹುದು ?

SDM Law Library


Q. No. 6. What are appeals ? State the classes of appeal provided under C.P.C.
ಮೇಲ್ಮನವಿ ಎಂದರೇನು ? ದಿವಾನಿ ಪ್ರಕ್ರಿಯೆ ಸಂಹಿತೆ ಅಡಿಯಲ್ಲಿ ವಿವಿಧ ಪ್ರಕಾರದ ಮೇಲ್ಮನವಿಗಳನ್ನು ತಿಳಿಸಿ.

Q. No. 7. What is legal disability ? Discuss the provisions in the Limitation Act affording protection under such disability.
ಕಾನೂನಿನ ದೃಷ್ಟಿಯಿಂದ ಅನರ್ಹತೆ ಎಂದರೇನು ? ಕಾಲ ಪರಿಮಿತಿ ನಿಯಮದಲ್ಲಿ ಇಂತಹ ಅನರ್ಹತೆಗೆ ಇರುವ ರಕ್ಷಣೆಯ ಉಪಬಂಧಗಳನ್ನು ಚರ್ಚಿಸಿ.

Q. No. 8. Write short notes on **any two** of the following :
ಈ ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ.

a) Dilatory pleas
ಡೈಲೇಟರಿ ಪ್ರತಿರೋಧಗಳು

b) Commission
ಆಯೋಗ

c) Caveat petition
ಎಚ್ಚರಿಕಾ ಪತ್ರ

Q. No. 9. Solve **any two** of the following problems :
ಈ ಕೆಳಗಿನ ಎರಡರ ಸಮಸ್ಯೆಯನ್ನು ಬಗೆಹರಿಸಿ.

a) Shankar was the trustee of a trust. After Shankar's death, Anil wrongfully takes the possession of the trust property. Rohan the son of Shankar files a suit for recovery of possession of the property against Anil as a legal heir and in his individual capacity. But Rohan did not succeed. Then Rohan files another suit for recovery of trust property against Anil in the capacity of a trustee, as he is appointed as a trustee after the death of Shankar. Can Rohan succeed in this case ?
ಶಂಕರ್ ಎಂಬುವನು ಒಂದು ನ್ಯಾಸದ ನ್ಯಾಸಧಾರನಾಗಿರುತ್ತಾನೆ. ಶಂಕರನ ಸಾವಿನ ನಂತರ ನ್ಯಾಸದ ಆಸ್ತಿಯನ್ನು ಅನಿಲನು ಅತಿಕ್ರಮವಾಗಿ ಸ್ವಾಧೀನಪಡಿಸಿಕೊಳ್ಳುತ್ತಾನೆ. ರೋಹನ್ ಎಂಬಾತ ಶಂಕರನ ಆಸ್ತಿಯ ವಾರಸುದಾರನಾಗಿದ್ದು ಮತ್ತು ಮಗನ ಸ್ಥಾನದ ಅನ್ವಯ ಅನಿಲನ ವಿರುದ್ಧ ಸ್ವತ್ತಿನ ಸ್ವಾಧೀನವನ್ನು ಪಡೆಯಲು ದಾವೆ ಹೂಡುತ್ತಾನೆ. ಆದರೆ ರೋಹನ್ ಈ ಒಂದು ವ್ಯಾಜ್ಯದಲ್ಲಿ ಜಯಶಾಲಿಯಾಗುವುದಿಲ್ಲ. ತದನಂತರ ರೋಹನನು ತಂದೆಯ ಸಾವಿನ ನ್ಯಾಸದ ನ್ಯಾಸಧಾರಿಯಾಗಿ ನೇಮಕಗೊಂಡಿರುವ ಕಾರಣ ರೋಹನನು ಅನಿಲನ ವಿರುದ್ಧ ನ್ಯಾಸದ ಆಸ್ತಿಯನ್ನು ಪಡೆಯಲು ನ್ಯಾಸಧಾರಿಯಾಗಿ ದಾವೆ ಹೂಡುತ್ತಾನೆ. ಈ ವ್ಯಾಜ್ಯದಲ್ಲಿ ರೋಹನ್ ಜಯಶಾಲಿಯಾಗುವನೇ ?

SDM Law Library



b) A textail manufacturing company having its Head Office at Bangalore, had branch offices at Hubli, Mysore and Mangalore. A dispute cropped up between Mr. Babu and Prakash Transport Company in respect of transaction through Hubli office. Mr. Babu files a suit in respect of the dispute against the company in the court of Mangalore. Is the court of Mangalore is competent to decide the case ? Give reason.

ಒಂದು ಬಟ್ಟೆ ತಯಾರಿಸುವ ಕಂಪನಿಯು ಬೆಂಗಳೂರಿನಲ್ಲಿ ತನ್ನ ಮುಖ್ಯ ಕಛೇರಿಯನ್ನು ಸ್ಥಾಪಿಸಿಕೊಳ್ಳುತ್ತದೆ ಹಾಗೂ ಇದರ ಶಾಖಾ ಕಛೇರಿಗಳನ್ನು ಹುಬ್ಬಳ್ಳಿ, ಮೈಸೂರು ಮತ್ತು ಮಂಗಳೂರಿನಲ್ಲಿ ಸ್ಥಾಪಿಸಿಕೊಳ್ಳುತ್ತದೆ. ಹುಬ್ಬಳ್ಳಿ ಕಛೇರಿಯಿಂದ ಸಾಗಾಣಿಕೆಯನ್ನು ಮಾಡುವ ವಿಚಾರದಲ್ಲಿ ಬಾಬು ಮತ್ತು ಪ್ರಕಾಶ್ ಸಾಗಾಣಿಕೆ ಕಂಪನಿಯ ನಡುವೆ ಒಂದು ತಗಾದೆ ಉದ್ಭವಿಸುತ್ತದೆ. ಈ ತಗಾದೆಯ ವಿಚಾರವಾಗಿ ಬಾಬು ಎಂಬುವನು ಮಂಗಳೂರಿನ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡುತ್ತಾನೆ. ಈ ವ್ಯಾಜ್ಯವನ್ನು ತೀರ್ಮಾನಿಸಲು ಮಂಗಳೂರಿನ ನ್ಯಾಯಾಲಯಕ್ಕೆ ಅಧಿಕಾರವಿದೆಯೇ ? ಕಾರಣಗಳೊಂದಿಗೆ ತಿಳಿಸಿ.

c) Charan wants to file a case against Rahul. As the court was closed due to the holiday and that being a last day of the limitation. Mr. Charan seeks extension of limitation period on that ground, will be succeed ?

ಚರಣ್ ಎಂಬುವನು ರಾಹುಲ್‌ನ ವಿರುದ್ಧ ವ್ಯಾಜ್ಯವನ್ನು ಹೂಡಲು ತಯಾರಿ ನಡೆಸುತ್ತಾನೆ. ಆದರೆ ಕಾಲ ಪರಿಮಿತಿ ಅವಧಿಯ ಕೊನೆಯ ದಿನ ನ್ಯಾಯಾಲಯವು ರಜೆ ಇರುವ ಕಾರಣ ಮುಚ್ಚಿರುತ್ತದೆ. ಚರಣನು ಈ ಕಾರಣವಾಗಿ ಕಾಲಮಿತಿಯ ವಿಸ್ತರಣೆಗಾಗಿ ಬಯಸುತ್ತಾನೆ. ಚರಣನು ಯಶಸ್ವಿಯಾಗುವನೇ ?

0501/0901

**V Semester of 3 Years LL.B./ IX Semester of 5 Years B.A. LL.B./B.B.A. LL.B. Examination, June/July 2014**

# CIVIL PROCEDURE CODE AND LIMITATION ACT

Duration : 3 Hours | Max. Marks : 100

**Instructions** : 1. Answer all **five** Questions.

2. Figures to the **right** indicate marks.

3. Answers should be written **completely** either in **English** or **Kannada**.

## UNIT – I

Q. No. 1. (a) Explain suit of civil nature with illustrations. Marks : 15

ದಿವಾಣಿ ಸ್ವರೂಪದ ದಾವೆಗಳನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

OR/ಅಥವಾ

Discuss the provisions of the civil procedure code relating to "Res-subjudice".

ದಿವಾಣಿ ಪ್ರಕ್ರಿಯಾ ಸಂಹಿತೆಯ ದಾವೆ ತಡೆಗೆ (Res-subjudice) ಸಂಬಂಧಪಟ್ಟ ಉಪಬಂಧಗಳನ್ನು ಚರ್ಚಿಸಿರಿ.

(b) Kinds of jurisdictions. Marks : 5

ಅಧಿಕಾರ ವ್ಯಾಪ್ತಿಯ ಪ್ರಕಾರಗಳು.

OR/ಅಥವಾ

Transfer of case.

ದಾವೆಗಳ ವರ್ಗಾವಣೆ.

## UNIT – II

Q. No. 2. (a) Explain the fundamental rules of pleadings. When the amendement of pleading is permissible ? Marks : 15

ವಾದ ಪತ್ರದ ಮೂಲಭೂತ ನಿಯಮಗಳನ್ನು ವಿವರಿಸಿ. ಯಾವಾಗ ವಾದ ಪತ್ರವನ್ನು ತಿದ್ದುಪಡಿಮಾಡಬಹುದು ?

OR/ಅಥವಾ

Who may be joined as plaintiff's and defendants ? What is the effect of misjoinder and non-joinder of parties ?

ಯಾರನ್ನು ವಾದಿಗಳು ಹಾಗೂ ಪ್ರತಿವಾದಿಗಳೆಂದು ಸೇರ್ಪಡಿಸಬಹುದು ? ಪಕ್ಷಗಾರರ ತಪ್ಪು ಸೇರ್ಪಡೆ ಹಾಗೂ ಪಕ್ಷಗಾರರ ಸೇರ್ಪಡಿಸದಿರುವಿಕೆ ಪರಿಣಾಮಗಳೇನು ?

(b) Written statement. Marks : 5

ಪ್ರತಿವಾದ ಪತ್ರ.

OR/ಅಥವಾ

Set off.

ವಜಾವಟ್ಟು.

## UNIT – III

Q. No. 3. (a) Explain consequences of appearance and non appearance of parties in a suit. Marks : 15

ದಾವೆಯಲ್ಲಿನ ಪಕ್ಷಗಾರರ ಹಾಜರಾತಿ ಮತ್ತು ಗೈರು ಹಾಜರಾತಿಯ ಪರಿಣಾಮಗಳನ್ನು ವಿವರಿಸಿರಿ.

OR/ಅಥವಾ

Who can apply for setting aside the sale in execution of a decree ? When can sale be set aside ?

ಡಿಕ್ರಿಯ ಅಮಲಬಜಾವಣೆಯಲ್ಲಾದ ಮಾರಾಟವನ್ನು ತಳ್ಳಿಹಾಕಲು ಯಾರು ಅರ್ಜಿಸಲ್ಲಿಸಬಹುದು ? ಯಾವಾಗ ಇಂತಹ ಮಾರಾಟ ತಳ್ಳಿಹಾಕಲ್ಪಡುತ್ತದೆ ?

(b) Kinds of issues. Marks : 5

ವಿವಾದಗಳ ಪ್ರಕಾರಗಳು.

OR/ಅಥವಾ

Adjournment of case.

ದಾವೆಯ ಮುಂದೂಡುವಿಕೆ.

## UNIT – IV

Q. No. 4. (a) "What are the powers and duties of the receiver" ? Explain. Marks : 15

ಸ್ವೀಕೃತದಾರನ ಅಧಿಕಾರ ಮತ್ತು ಕರ್ತವ್ಯಗಳಾವುವು ?

OR/ಅಥವಾ

Discuss the principles governing the grant of temporary injunction.

''ತಾತ್ಕಾಲಿಕ ತಡೆಯಾಜ್ಞೆ''ಯನ್ನು ನೀಡುವುದಕ್ಕೆ ಅನ್ವಯಿಸುವ ಸಿದ್ಧಾಂತಗಳನ್ನು ಚರ್ಚಿಸಿರಿ.

(b) Appeals. Marks : 5

ಮೇಲ್ಮನವಿಗಳು.

OR/ಅಥವಾ

Arrest before judgement.

ನಿರ್ಣಯ ಪೂರ್ವ ದಸ್ತಗಿರಿ.

## UNIT – V

Q. No. 5. (a) Discuss the provisions of limitation Act governing the condonation of delay. Marks : 15

ವಿಳಂಬವನ್ನು ಮನ್ನಾ ಮಾಡುವ ಕುರಿತಂತೆ ಕಾಲಮಿತಿ ಅಧಿನಿಯಮದಲ್ಲಿರುವ ನಿಯಮಗಳನ್ನು ಚರ್ಚಿಸಿರಿ.

OR/ಅಥವಾ

State the general rules for calculation of period of limitation for filing suit.

ದಾವೆಗಳನ್ನು ದಾಖಲು ಮಾಡುವಾಗ ಕಾಲಮಿತಿಯ ಗಣನೆಗೆ ಅನ್ವಯಿಸುವ ಸಾಮಾನ್ಯ ನಿಯಮಗಳನ್ನು ಹೇಳಿರಿ.

(b) Objects of law of limitation. Marks : 5

ಕಾಲಮಿತಿಯ ಅಧಿನಿಯಮದ ಉದ್ದೇಶಗಳು.

OR/ಅಥವಾ

Effects of fraud on the period of limitation.

ಕಾಲಮಿತಿಯ ಅವಧಿಯ ಮೇಲೆ ಮೋಸದ ಪರಿಣಾಮಗಳು.